ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು
ದೂರವಾಣಿ ಸಂಖ್ಯೆ:0821-2424079,2422110,2428383
ಫ್ಯಾಕ್ಸ್ ನಂ : 2429012 & 2428383 E-Mail : dcofficemysuru@gmail.com

ಸಂಖ್ಯೆ : MYSDC - MAG1/MLO/71/2020 ದಿನಾಂಕ: 17 /03/2020

# COVID-19 ಹರಡುವಿಕೆಯನ್ನು ತಡೆಗಟ್ಟಲು ದಿನಸಿ ಪದಾರ್ಥಗಳನ್ನು ಮಾರಾಟ ಮಾಡುವ ಮಳಿಗೆಗಳು ಮತ್ತು ಸೂಪರ್ ಮಾರ್ಕೆಟ್ ಗಳು ಒಳಗೊಂಡಂತೆ ಪಾಲಿಸಬೇಕಾದ ಕ್ರಮಗಳು (ಸಲಹೆಗಳು)

1. ಹೆಚ್ಚಿನ ಜನಸಂದಣಿಯನ್ನು ಮಳಿಗೆಗಳಿಗೆ ಸೆಳೆಯುವ Time Bound Sales Promotion offers ಗಳನ್ನು ನಿಷೇಧಿಸಿದೆ.
2. ಮಾರಾಟ ಮಳಿಗೆಗಳ ಒಳಗೆ ಜನದಟ್ಟಣೆ ಕಡಿಮೆ ಮಾಡಲು ಸಮಯ ನಿಗಧಿಪಡಿಸಿದ ಟೋಕನ್ ವ್ಯವಸ್ಥೆಯನ್ನು ಪರಿಚಯಿಸುವುದು ಸೂಕ್ತ.
3. ಶಾಪಿಂಗ್ ಮಳಿಗೆಗಳಲ್ಲಿ ಆಲ್ಕೊಹಾಲ್ ಆಧಾರಿತ ಹ್ಯಾಂಡ್ ಸ್ಯಾನಿಟೈಜರ್ ಅನ್ನು ವಿವಿಧ ಸ್ಥಳಗಳಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳುವುದು.
4. ರೇಲಿಂಗ್ಸ್, ಡೋರ್, ಹ್ಯಾಂಡಲ್ಸ್, ನೆಲಹಾಸುಗಳು, ಬಿಲ್ಲಿಂಗ್ ಟೇಬಲ್ ಕೌಂಟರ್‌ಗಳನ್ನು ಮತ್ತು ಯಾವುದೇ ವ್ಯಕ್ತಿಯು ಸ್ಪರ್ಶಿಸುವಂತಹ ಯಾವುದೇ ಜಾಗವನ್ನು ನಿಯಮಿತವಾಗಿ ಕಾಲಕಾಲಕ್ಕೆ ಸೋಡಿಯಂ ಹೈಪೋಕ್ಲೋರೈಟ್/ಬ್ಲೀಚಿಂಗ್ ಪೌಡರ್ ಅಥವಾ ಇನ್ನಾವುದೇ ಸೋಂಕು ನಿವಾರಕದಿಂದ (Disinfectant) ಸ್ವಚಗೊಳಿಸುವುದು.
5. ಮಳಿಗೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಕೈ ನೈರ್ಮಲ್ಯ ಮತ್ತು ಸ್ವಚ್ಛತೆಯ ಬಗ್ಗೆ ತರಬೇತಿ ನೀಡುವುದು.
6. ಜ್ವರ, ಕೆಮ್ಮು, ಶೀತ ಅಥವಾ ಉಸಿರಾಟದ ತೊಂದರೆಯ ಲಕ್ಷಣಗಳನ್ನು ವರದಿ ಮಾಡುವ ಯಾವುದೇ ಸಿಬ್ಬಂದಿಗೆ ತಕ್ಷಣವೇಅನಾರೋಗ್ಯ ರಜೆ ನೀಡುವುದು ಮತ್ತು ವೈದ್ಯಕೀಯ ಚಿಕಿತ್ಸೆ ಪಡೆಯಲು ಸಲಹೆ ನೀಡುವುದು.
7. ಸಾಧ್ಯವಾದಷ್ಟು ಗ್ರಾಹಕರು ವಿವೇಚನೆಯಿಲ್ಲದೆ ಎಲ್ಲಾ ಉತ್ಪನ್ನವನ್ನು ಸ್ಪರ್ಶಿಸದಂತೆ ಸೂಚಿಸಲು ಮತ್ತು ಬದಲಾಗಿ ಸಾಕಷ್ಟು ಸಹಾಯಕರನ್ನು ನಿಯೋಜಿಸಿ, ಗ್ರಾಹಕರಿಗೆ ಅಗತ್ಯವಾದ ಉತ್ಪನ್ನವನ್ನು ತೆಗೆದುಕೊಳ್ಳಲು ಸಹಾಯ ಮಾಡುವಂತೆ ನೋಡಿಕೊಳ್ಳುವುದು ಸೂಕ್ತ.
8. ಯಾವುದೇ ಸಮಯದಲ್ಲಿ ಬಿಲ್ಲಿಂಗ್ ಕೌಂಟರ್‌ಗಳಲ್ಲಿ ಜನಸಂದಣಿ ಉಂಟಾಗದಂತೆ ಕ್ರಮವಹಿಸುವುದು. ಮಳಿಗೆಯ ಮಾಲೀಕರು ಮತ್ತು ನಿರ್ವಹಣೆಯ ಮಂಡಳಿಯವರು ಪ್ರತಿ ಕೌಂಟರ್ ನಲ್ಲಿಯೂ ಸಾಕಷ್ಟು ಸಂಖ್ಯೆಯ ಸಿಬ್ಬಂದಿ ಇರುವುದನ್ನು ಖಚಿತಪಡಿಸಿಕೊಳ್ಳುವುದು. ವಾರಾಂತ್ಯದಲ್ಲಿ ಬಿಲ್ಲಿಂಗ್ ಕೌಂಟರ್‌ಗಳಲ್ಲಿ ಹೆಚ್ಚುವ ಜನಸಂದಣಿಯನ್ನು ನಿರ್ವಹಿಸಲು ಹೆಚ್ಚುವರಿ ವ್ಯವಸ್ಥೆಗಳನ್ನು ಮಾಲೀಕರು ಮತ್ತು ನಿರ್ವಹಣೆಯು ಮಂಡಳಿಯವರು ಮಾಡಿಕೊಳ್ಳುವುದು.
9. ತಮ್ಮ ಮಳಿಗೆಗಳಲ್ಲಿ ಜಾಗೃತಿ ಮೂಡಿಸಲು ಮುಂಜಾಗ್ರತಾ ಕ್ರಮಗಳ ಮಾಹಿತಿಯನ್ನು ಮುದ್ರಿಸಿ ಪ್ರದರ್ಶಿಸುವುದು (ಪ್ಲಾಸ್ಟಿಕ್ ಫ್ಲೆಕ್ಸ್ ಬ್ಯಾನರ್‌ಗಳಲ್ಲಿ ಮುದ್ರಿಸುವಂತಿಲ್ಲ).

17 ಜಿಲ್ಲಾಧಿಕಾರಿ,
ಮೈಸೂರು ಜಿಲ್ಲೆ, ಮೈಸೂರು

Scanned with CamScanner